**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಮೂಡಿಗೆರೆ**

**ಅ.ದಾ.120/2013**

| | | |
|---|---|---|
| ಸಾಕ್ಷಿದಾರರ ಹೆಸರು | : ರಘು ಎಸ್.ಕೆ | ಸಿಡಬ್ಲೂ-2 |
| ತಂದೆಯ ಹೆಸರು | : ಕಪನೀಗೌಡ | |
| ವಯಸ್ಸು | : 39 ವರ್ಷ | |
| ಉದ್ಯೋಗ | : ಸರ್ವೇಯರ್ | ಪ್ರಮಾಣ ವಚನ ಬೋಧಿಸಲಾದ |
| ವಾಸಸ್ಥಳ | : ಮೂಡಿಗೆರೆ | ದಿನಾಂಕಃ 15.10.2025 |

**:ಮುಖ್ಯ ವಿಚಾರಣೆ ನ್ಯಾಯಾಲಯದಿಂದ:**

ನಾನು 2015 ರಿಂದ ಇಲ್ಲಿಯವರೆಗೂ ಮೂಡಿಗೆರೆಯ ಸರ್ವೇ ಇಲಾಖೆಯಲ್ಲಿ ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.14.03.2025 ರ ಆದೇಶದಲ್ಲಿ ನ್ಯಾಯಲಯವು ಈ ಹಿಂದೆ ಹಾಜರು ಮಾಡಿದ್ದಂತಹ ವರದಿಯನ್ನು ತಿರಸ್ಕರಿಸಿ ಪುನಃ ಹೊಸದಾಗಿ ವರದಿಯನ್ನು ಸಲ್ಲಿಸಲು ಆದೇಶಿಸಿರುತ್ತಾರೆ ಮತ್ತು ಸದರಿ ಆದೇಶದಲ್ಲಿ ಪಕ್ಷಗಾರರಿಗೆ ನ್ಯಾಯಾಲಯದ ಆಯೋಗಿಯಿಂದ ಯಾವುದೇ ನೋಟೀಸನ್ನು ನಿರೀಕ್ಷಿಸದೆ ಸ್ಥಳದಲ್ಲಿ ಸರ್ವೇ ಕಾರ್ಯದ ದಿನ ಹಾಜರಾಗಬೇಕು ಎಂದು ಆದೇಶ ಮಾಡಲಾಗಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ಆದೇಶದಲ್ಲಿ ನ್ಯಾಯಾಲಯವು ದಿನಾಂಕವನ್ನು ನಮೂದಿಸಿ ಆದೇಶಿಸಿದ ಮೇರೆಗೆ ದಿ.11.04.2025 ರಂದು ನಾನು ಸ್ಥಳಕ್ಕೆ ಭೇಟಿ ನೀಡಿ ಅಳತೆ ಕಾರ್ಯವನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಹೊಸದಾಗಿ ವರದಿಯನ್ನು ದಿ.24.06.2025 ರಂದು ಸಲ್ಲಿಸಿರುತ್ತೇನೆ.

ದಾವಾ ಸ್ವತ್ತಿಗೆ ಸಂಬಂಧಿಸಿದ ನಕ್ಷೆಯನ್ನು ನಿಪಿ-8, ಪಕ್ಷಗಾರರ ಹೇಳಿಕೆ ನಿಸಿ-9 ಮತ್ತು ಕಛೇರಿಗೆ ಕೊಟ್ಟಂತಹ ಎರಡು ದಾಖಲೆಗಳನ್ನು ನಿಸಿ-10 ಮತ್ತು 11 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ನಾನು ಪ್ರಸ್ತುತ ದಾವೆಯಲ್ಲಿ ಮೂರನೇ ಬಾರಿಗೆ ವರದಿಯನ್ನು ನೀಡುತ್ತಿದ್ದೇನೆ ಎಂದರೆ ಸರಿ. ವಾದಿಗಳು ನೀಡಿದ ಸೂಚನಾವಳಿಯನ್ನು ಸರಿಯಾದ ರೀತಿಯಲ್ಲಿ ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸೂಚನಾವಳಿಗೆ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸೂಚನಾವಳಿಯಲ್ಲಿ ಅಸಲು ದಾವಾ 124/2013 ರಲ್ಲಿ ಹಾಜರುಪಡಿಸಿದಂತಹ ನ್ಯಾಯಾಲಯದ ನಿಯೋಗಿಯ ಈ ಪೂರ್ವದ ವರದಿಯನ್ನು ತೆಗೆದುಕೊಂಡು ಹೋಗಬೇಕು ಎಂದು ಆದೇಶಿಸಲಾಗಿತ್ತು ಎಂದರೆ ಸರಿಯಲ್ಲ. ಈ ರೀತಿಯಾಗಿ ಸೂಚನಾವಳಿಯಲ್ಲಿ ತಿಳಿಸಿದ್ದರೂ ಸಹಾ ಅದರ ಪ್ರಕಾರ ನಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಈ ಹಿಂದಿನ ವರದಿಯಲ್ಲಿ ಸ.ನಂ.58/2 ರ ಜಮೀನನ್ನು ಪ್ರತಿವಾದಿಗಳು

ಸಂಪೂರ್ಣವಾಗಿ ಒತ್ತುವರಿ ಮಾಡಿರುವ ಬಗ್ಗೆ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲನೇ ಬಾರಿಗ ವರದಿಯನ್ನು ನೀಡುವ ಸಮಯದಲ್ಲಿ ಪ್ರತಿವಾದಿಗಳು ಸ್ಥಳದಲ್ಲಿ ಹಾಜರಿರದ ಕಾರಣ ವಾದಿಗಳ ಮಾಹಿತಿಯ ಮೇರೆಗೆ ಆ ರೀತಿಯಾಗಿ ವರದಿಯನ್ನು ನೀಡಿದ್ದೆ ಮತ್ತು 2 ನೇ ಬಾರಿಗೆ ವಾದಿ ಮತ್ತು ಪ್ರತಿವಾದಿಗಳು ಇಬ್ಬರೂ ಸಹ ಸ್ಥಳದಲ್ಲಿ ಹಾಜರಿದ್ದು, ಒತ್ತುವರಿಯ ಬಗ್ಗೆ ನಕ್ಷೆಯಲ್ಲಿ ಗುರುತಿಸಿದ ಎರಡನೇ ಬಾರಿಗೆ ವರದಿಯನ್ನು ನೀಡಿರುತ್ತೇನೆ.

ನಾನು ಅಳತೆ ಕಾರ್ಯದ ಸಮಯದಲ್ಲಿ ಸ.ನಂ. ಗಳಿಗೆ ಸಂಬಂಧಿಸಿದ ಅಟ್ಲಾಸ್ ಕಾಪಿ ಮತ್ತು ಹಿಸ್ಸಾ ಪೋಡಿ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುತ್ತೇನೆ ಮತ್ತು ಪಹಣಿಯ ಪ್ರಕಾರ ಸ್ಥಳ ಪರಿಶೀಲನೆಯನ್ನು ಮಾಡಿಕೊಂಡಿರುತ್ತೇನೆ. ನಾನು ಪಹಣಿಯಲ್ಲಿ ನೋಡಿದ ಪ್ರಕಾರ ಸ.ನಂ.58/2 ರಲ್ಲಿ 2 ಎಕರೆ 36 ಗುಂಟೆ, 6 ಗುಂಟೆ ಖರಾಬು ಜಮೀನನ್ನು ಕಳೆದು ಒಟ್ಟಾಗಿ 2 ಎಕರೆ 30 ಗುಂಟೆ ವಿಸ್ತೀರ್ಣವಿರುತ್ತದೆ. ನಾನು ಅಳತೆ ಕಾರ್ಯದ ಸಮಯದಲ್ಲಿ ಆಕಾರ್ ಬಂದ್ ನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ನಾನು ಸದರಿ ಸಮಯದಲ್ಲಿ ಅಕಾರ್ ಬಂದ್ ನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆಕಾರ್ ಬಂದಿನ ಪ್ರಕಾರವು ಸ.ನಂ.58/2 ರಲ್ಲಿ 2 ಎಕರೆ 30 ಗುಂಟೆ ಮತ್ತು 6 ಗುಂಟೆ ಖರಾಬು ಜಮೀನಿರುತ್ತದೆ. ನಾನು ಆಕಾರ್ ಬಂದ್ ನ್ನು ಹೊರತುಪಡಿಸಿ ಇತರೆ ಎಲ್ಲಾ ದಾಖಲಾತಿಗಳನ್ನು ನನ್ನ ವರದಿಯಲ್ಲಿ ಲಗತ್ತಿಸಿರುತ್ತೇನೆ. ಆಕರ್ ಬಂದ್ ನ್ನು ನಾನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆಕರ್ ಬಂದ್ ನ್ನು ನಾವು ನಮ್ಮ ಪ್ರಕಾರ ಬರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನಮ್ಮ ಕೆಲಸದ ನಿಮಿತ್ತ ಆಕಾರ್ ಬಂದ್ ನ ಅವಶ್ಯಕತೆ ಇದ್ದಲ್ಲಿ ನಮ್ಮ ಕಛೇರಿಯಿಂದ ನೀಡಲಾಗುತ್ತದೆ ಎಂದರೆ ಸರಿ.

ಸ.ನಂ.58/2 ರ ವಿಸ್ತೀರ್ಣವು 2 ಎಕರೆ 36 ಗುಂಟೆ ಇದ್ದರೂ ಸಹಾ ನಾನು ಸುಳ್ಳಾಗಿ 2 ಎಕರೆ 20 ಗುಂಟೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನ ವಿಸ್ತೀರ್ಣವನ್ನು ತಪ್ಪಾಗಿ ನಮೂದಿಸಿರುವ ಕಾರಣ ಆಕರ್ ಬಂದ್ ನ್ನು ನನ್ನ ವರದಿಯಲ್ಲಿ ಲಗತ್ತಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವರದಿಯಲ್ಲಿ ತಿಳಿಸಿರುವಂತೆ ಸ.ನಂ.58/2 ರ ಜಮೀನನ್ನು ಯಾರು ಒತ್ತುವರಿ ಮಾಡಿರುತ್ತಾರೆ ಎಂದು ತಿಳಿಸಿಲ್ಲ ಎಂದರೆ ಸರಿ. ಈ ಹಿಂದೆಯೂ ಸಹಾ 5 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವವರ ಬಗ್ಗೆ ನಮೂದಿಸಲಾಗಿರುವುದಿಲ್ಲ ಎಂದು ವರದಿಯನ್ನು ಹಿಂತಿರುಗಿಸಲಾಗಿತ್ತು ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿಗಳು ಸದರಿ ಜಮೀನನ್ನು ಯಾರು ಒತ್ತುವರಿ ಮಾಡಿರುತ್ತಾರೆ ಎಂದು ತಿಳಿಸಿರದ ಕಾರಣ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯವರು ಸದರಿ ಜಮೀನನ್ನು ಒತ್ತುವರಿ ಮಾಡಿರುವ ವಿಷಯ ತಿಳಿದಿದ್ದರೂ ಸಹಾ ಅವರ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. 5 ಗುಂಟೆ ಒತ್ತುವರಿ ಜಮೀನು 3 ನೇ ಪ್ರತಿವಾದಿಯವರ ಜಮೀನಿಗೆ ಲಗತ್ತಾಗಿರುತ್ತದೆ ಸದರಿ 5 ಗುಂಟೆ ಜಮೀನಿಗೆ ಬೇಲಿಯನ್ನು ಹಾಕಲಾಗಿರುತ್ತದೆ. ಸದರಿ ಒತ್ತುವರಿಯ ಬಗ್ಗೆ ಪ್ರತ್ಯೇಕವಾಗಿ ಆದೇಶವಾಗಿರದ ಮೇರೆಗೆ ಯಾವುದೇ ಗ್ರಾಮ ಲೆಕ್ಕಿಗ ಹಾಗೂ ಕಂದಾಯ ಅಧಿಕಾರಿಗಳ

ಸಹಾಯವನ್ನು ಸದರಿ ಒತ್ತುವರಿ ಜಮೀನಿನ ಬಗ್ಗೆ ಮಾಹಿತಿ ಪಡೆಯಲು ಸಹಾಯವನ್ನು ಪಡೆದಿರುವುದಿಲ್ಲ.

ದಿ.11.04.2025 ರಂದು ನಕ್ಷೆಯನ್ನು ತಯಾರಿಸಲಾಗಿರುತ್ತದೆ. ಸದರಿ ನಕ್ಷೆಯನ್ನು ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ಅಳತೆ ಕಾರ್ಯದ ಸಮಯದಲ್ಲಿ ನಾವು ಗಮನಿಸಿದ ವಿಷಯದ ಬಗ್ಗೆ ಪ್ರತ್ಯೇಕವಾಗಿ ಬರೆದಿರುತ್ತೇವೆ ಎಂದರೆ ಸರಿ. ಹಾಗೆಯೇ ಕರಡು ನಕ್ಷೆಯನ್ನು ತಯಾರಿಸಿರುತ್ತೇವೆ ಎಂದರೆ ಸರಿ. ಸದರಿ ಕರಡು ನಕ್ಷೆಯನ್ನು ವರದಿಯೊಂದಿಗೆ ಲಗತ್ತಿಸಲಾಗಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಗಮನಿಸಿದ ವಿಷಯಕ್ಕೂ ಮತ್ತು ವರದಿಯಲ್ಲಿ ತಿಳಿಸಿರುವ ವಿಷಯಕ್ಕೂ ವ್ಯತ್ಯಾಸವಿರುವ ಕಾರಣ ಸದರಿ ಕರಡು ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಿಂದಿನ ವರದಿಯಲ್ಲಿ ಹಳ್ಳದ ಖರಾಬು 13 ಗುಂಟೆ ಎಂದು ತೋರಿಸಲಾಗಿತ್ತು ಎಂದರೆ ಸರಿ. ನನ್ನ ಹಿಂದಿನ ವರದಿಯಲ್ಲಿ ಹಳ್ಳದ ಖರಾಬು 12 ಗುಂಟೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಹಳ್ಳದ 13 ಗುಂಟೆ ಜಮೀನು 3 ಪ್ರತಿವಾದಿಯವರು ಜಮೀನಿಗೆ ಲಗತ್ತಾಗಿರುತ್ತದೆ. ಪ್ರತಿವಾದಿಯವರು ಒತ್ತುವರಿ ಮಾಡಿರುವ ದಕ್ಷಿಣ ದಿಕ್ಕಿಗೆ ಹಳ್ಳದ ಜಮೀನು ಬರುತ್ತದೆ. ನನ್ನ ಮೊದಲನೇ ವರದಿಯಲ್ಲಿ 13 ಗುಂಟೆ ಹಳ್ಳದ ಜಮೀನನ್ನು ಗುರುತಿಸಿರುವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯವರು ಒತ್ತುವರಿ ಮಾಡಿರುವ ಕೊನೆಯ ಭಾಗದಲ್ಲಿ 13 ಗುಂಟೆ ಹಳ್ಳದ ಜಮೀನು ಬರುತ್ತದೆ. ಸದರಿ ಹಳ್ಳದ ಜಮೀನಿನ ಸುತ್ತ ಮುತ್ತ ಬೇಲಿ ಇರುವುದಿಲ್ಲ.

ಹಳ್ಳದ ದಕ್ಷಿಣ ದಿಕ್ಕಿಗೆ ಯಾರು ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಸ.ನಂ.58/11 ರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಹಳ್ಳದ ಉತ್ತರ ಭಾಗವಾಗಿ 3 ನೇ ಪ್ರತಿವಾದಿಯವರು ಒತ್ತುವರಿ ಮಾಡಿರುವ ಜಮೀನಿರುತ್ತದೆ. ಸದರಿ ಹಳ್ಳವು ಪೂರ್ವ ದಿಕ್ಕಿಗೆ ಹರಿದು ಹೋಗುತ್ತಿರುತ್ತದೆ. ಒತ್ತುವರಿ ಮಾಡಿರುವ ಜಮೀನಿನ ಪೂರ್ವ ದಿಕ್ಕಿಗೆ ಸ.ನಂ.58/9 ಜಮೀನಿರುತ್ತದೆ. ಹಳ್ಳದ ಪಶ್ಚಿಮ ದಿಕ್ಕಿಗೆ ಸ.ನಂ.58/11 ರ ಜಮೀನಿರುತ್ತದೆ. ನಾನು ಹೇಳಿದಂತೆ ಹಳ್ಳದ ಪ್ರದೇಶವು ಇರುವುದಿಲ್ಲ ಪ್ರತಿವಾದಿಯವರು ಒತ್ತುವರಿ ಮಾಡಿರುವ ಜಮೀನನ್ನು ಹಳ್ಳದ ಪ್ರದೇಶ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಒತ್ತುವರಿ ಮಾಡಿರುವ ಜಮೀನು ಹೆಚ್ಚಿನದಾಗಿ ತೋರಿಸಬಾರದು ಎಂಬ ಕಾರಣದಿಂದ ಹಳ್ಳದ ಜಮೀನು ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ.ನಂ.58/2 ಮತ್ತು ಸ.ನಂ.58/11 ರ ಗಡಿ ಗುರುತಿನ ಸಮಯದಲ್ಲಿ ಸದರಿ ಹಳ್ಳವನ್ನು ಇರುವ ಬಗ್ಗೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹಳ್ಳವು 90 ಮೀಟರ್ ಉದ್ದ, 60 ಮೀಟರ್ ಅಗಲ ಇದ್ದು ಮುಂದುವರೆಯುತ್ತಾ ಅದರ ಅಗಲ ಮತ್ತು ಉದ್ದವು ಕಡಿತವಾಗಿರುತ್ತದೆ. ನಾನು ಹೇಳುವ ರೀತಿಯ ಅಳತೆಯ ಹಳ್ಳ ಸದರಿ ಸ್ಥಳದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯವರು ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶದಿಂದ ಉತ್ಪ್ರೇಕ್ಷತೆಯಿಂದ ಹಳ್ಳವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿ. ನಾನು ಕಂದಾಯ ದಾಖಲಾತಿಗಳನ್ನು ಪರಿಶೀಲಿಸಿದಾಗ 6 ಗುಂಟೆ ಖರಾಬು ಹಳ್ಳಕ್ಕಾಗಿ ಕಳೆಯಲಾಗಿರುತ್ತದೆ ಎಂದು ತಿಳಿದುಬಂದಿರುತ್ತದೆ. ನನ್ನ ಪ್ರಕಾರ 18 ಗುಂಟೆಯಲ್ಲಿ ಹಳ್ಳದ ಖರಾಬು ಇರುತ್ತದೆ ಎಂದರೆ ಸಾಕ್ಷಿಯು 18 ಗುಂಟೆಯ ಖರಾಬು ಜಮೀನಿನ

ಒಳಗೆ ಹಳ್ಳದ ಖರಾಬು ಇರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ನಕ್ಷೆಯಲ್ಲಿ ಹಳ್ಳದ ಖರಾಬನ್ನು ಪ್ರತ್ಯೇಕವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯವರು ಸ.ನಂ.58/2 ರಲ್ಲಿ 2 ಎಕರೆ 9 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದರೂ ಸಹಾ ನಾನು 12 ಎಕರೆ 30 ಗುಂಟೆಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಫೈಜುಲ್ ಎಂಬುವವರು 24 ಗುಂಟೆಯನ್ನು ಒತ್ತುವರಿ ಮಾಡಿದ್ದರೂ ಸಹಾ 12 ಗುಂಟೆ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದಿನ ADLR ರವರು ಅಸಲು ದಾವಾ 124/2013 ರ ಪ್ರಕರಣದಲ್ಲಿ ನೀಡಿದ ವರದಿಯ ವಿರುದ್ಧವಾಗಿ ಈ ಪ್ರಕರಣದಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವರದಿಯ ದಾಖಲಾತಿಯನ್ನು ನನಗೆ ಅಳತೆಯ ಸಮಯದಲ್ಲಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

ಸದರಿ ದಾಖಲಾತಿಯನ್ನು ನೀಡಿದ್ದರೂ ಸಹಾ ನನ್ನ ಉತ್ಪ್ರೇಕ್ಷತೆಯಿಂದ ಈ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವರದಿಯನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸದೇ ಇದ್ದ ಕಾರಣ ಸ.ನಂ.58/2 ರಲ್ಲಿ ಕೇವಲ 2 ಎಕರೆ 20 ಗುಂಟೆ ಜಮೀನಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ವರದಿಯಲ್ಲಿ ಹಿಸ್ಸಾ ಪೋಡಿಯ ಸಮಯದಲ್ಲಿ 16 ಗುಂಟೆ ಜಮೀನು ಕಡಿಮೆಯಾಗಿರುತ್ತದೆ ಎಂದು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ತಪ್ಪಾಗಿ ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ.58/2 ರಲ್ಲಿ ವಾದಿಯೂ ಯಾವುದೇ ವಿಸ್ತೀರ್ಣದ ಅನುಭವದಿಯಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನು ಒತ್ತುವರಿಯಾಗಿರುತ್ತದೆ ಎಂದರೆ ಸರಿ. ನನ್ನ ಹಿಂದಿನ ವರದಿಯಲ್ಲಿ ಸ.ನಂ.65/1 ಕ್ಕೆ ಹೋಗಲು ಸ.ನಂ.58/2 ರಲ್ಲಿ ರಸ್ತೆ ಇರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಆದರೆ ನಾನು ಈ ಬಾರಿ ನನ್ನ ವರದಿಯಲ್ಲಿ ಸದರಿ ವಿಷಯವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.64/3 ರ ಜಮೀನು ವಾದಿಯವರಿಗೆ ಸೇರಿದ್ದಾಗಿರುತ್ತದೆ. ಸ.ನಂ.64/3 ರ ಜಮೀನಿನಿಂದ ಸ.ನಂ.65/1 ಕ್ಕೆ ಹೋಗಲು ರಸ್ತೆಯನ್ನು ವಾದಿಯೇ ತೋರಿಸಿರುತ್ತಾರೆ.

ಸ.ನಂ.64/3 ರ ಜಮೀನು ಫೈಜಲ್ ಬಿನ್ ಅಬ್ದುಲ್ ಖಾದರ್ ರವರಿಗೆ ಸೇರಿದ್ದಾಗಿರುತ್ತದೆ. ಸ.ನಂ.64/3 ರ ಜಮೀನಿನ ರಸ್ತೆಯ ಪಶ್ಚಿಮ ದಿಕ್ಕಿಗೆ ವಾದಿಯವರ ಪ್ರದೇಶವಾಗಿರುತ್ತದೆ. ಸ.ನಂ.62 ರ ಜಮೀನಿನ ಬಾಬ್ತು ಆದೇಶ ಮಾಡಿರದ ಕಾರಣ ಅದರ ಬಗ್ಗೆ ಯಾವುದೇ ತನಿಖೆಯನ್ನು ಕೈಗೊಂಡಿರುವುದಿಲ್ಲ. ಸ.ನಂ.62 ರ ಜಮೀನು ಸರ್ಕಾರದ ಜಮೀನಾಗಿರುತ್ತದೆ ಅದರಲ್ಲಿ ಯಾರು ಯಾರು ಖಾತೆಯನ್ನು ಹೊಂದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನಾನು ಸಮರ್ಪಕವಾಗಿ ನನ್ನ ಅಳತೆ ಕಾರ್ಯವನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಜಮೀನನ್ನು ಒತ್ತುವರಿ ಮಾಡಿರುವವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿರುವಂತಹ ತಪ್ಪು ಹೊರ ಬರುತ್ತದೆ ಎಂಬ ಕಾರಣದಿಂದ ಆಕಾರ್ ಬಂದ್ ನ್ನು ಮತ್ತು ಕರುಡು ನಕ್ಷೆಯನ್ನು ನನ್ನ ವರದಿಯಲ್ಲಿ ಲಗತ್ತಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 3 ನೇ ಪ್ರತಿವಾದಿ ಪರ ಶ್ರೀ ಟಿ.ಎ. ವಕೀಲರ ಪರವಾಗಿ ಶ್ರೀ ಹೆಚ್.ಕೆ.ಡಿ. ವಕೀಲರಿಂದ:</u>**

ಸ.ನಂ.58 ರ ಜಮೀನಿನ ಸಂಪೂರ್ಣ ಅಳತೆಯನ್ನು ಮಾಡಲಾಗಿರುತ್ತದೆ. ಸದರಿ ಜಮೀನಿನಲ್ಲಿ 1 ರಿಂದ 12 ರ ಪೋಡಿಯಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಅಟ್ಲಾಸ್ ದಾಖಲಾತಿಯ ಮೇರೆಗೆ ಅಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದರೆ ಸರಿ. ಅಳತೆ ಕಾರ್ಯಕ್ಕೆ ಹೋಗುವ ಸಮಯದಲ್ಲಿ ಅಟ್ಲಾಸ್ ಕಾಪಿಯನ್ನು ನಾನು ತೆಗೆದುಕೊಂಡು ಹೋಗಿರುತ್ತೇನೆ. ನಾನು ನೀಡಿದಂತಹ ವರದಿಯಲ್ಲಿ ಅಟ್ಲಾಸ್ ಕಾಪಿಯನ್ನು ಲಗತ್ತಿಸಿರುತ್ತೇನೆ. ಅಟ್ಲಾಸ್ ಆಧಾರದ ಮೇಲೆ ಸ.ನಂ.58/2 ಮತ್ತು 11 ರ ಕಲ್ಲು ಬಾಂದ್ ನ್ನು ಗುರುತುಮಾಡಿರುತ್ತೇನೆ. ಸ.ನಂ.58 ರಲ್ಲಿ ಹೊಳೆಯ ಜಾಗವು ಬರುತ್ತದೆ ಎಂದರೆ ಸರಿ. ಹಳ್ಳದ ಜಾಗವನ್ನು ಕಳೆದು ನಾವು ಪೋಡಿಯನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈ ಹಿಂದೆ ಪೋಡಿಯಾದ ಆಧಾರದ ಮೇರೆಗೆ ನಕ್ಷೆಯನ್ನು ತಯಾರಿಸಲಾಗಿರುತ್ತದೆ. ನಾನು ಹೇಳಿದಂತೆ ಮೂರನೇ ಪ್ರತಿವಾದಿಯವರು ಯಾವುದೇ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.58 ರ ಜಮೀನನ್ನು ಅಳತೆ ಕಾರ್ಯ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.